Vidyagiri
DHARWAD - 04.

# ಲೂಯಿ ಬ್ರೈಲ್

• ಡಾ. ಆರ್. ವ್ಹಿ. ಪಾಟೀಲ

ಲೂಯಿ ಬ್ರೈಲ್ ರವರು ೪-೧-೧೮೦೯ ರಂದು ಫ್ರಾನ್ಸ್ ರಾಷ್ಟ್ರದ ಪ್ಯಾರಿಸ್ ನಗರದ ಹತ್ತಿರದಲ್ಲಿರುವ ಕೂಪ್ರೆ ಎಂಬ ಗ್ರಾಮದಲ್ಲಿ ಇವರ ಜನಿಸಿದರು. ಇವರ ತಂದೆ ಸೈಮನ್-ರೆ-ಬ್ರೆಯ್ಸ್ಲ್ ತಾಯಿ ಮೋನಿಕ ಬ್ರೆಯ್ಸ್ಲ್. ಲೂಯಿಯು ಹುಟ್ಟು ಅಂಧನಲ್ಲ. ಈತನು ಜನಿಸಿದಾಗ ಎಲ್ಲರಂತೆ ಸಾಮಾನ್ಯನು. ಈತನ ತಂದೆಯು ಕುದುರೆ ಸವಾರರಿಗೆ ಅಗತ್ಯವಾದ ಚರ್ಮದ ಜೀನ್ ತಯಾರಿಕೆಯಲ್ಲಿ ಅಗ್ರಗಣ್ಯನಾಗಿದ್ದ. ಒಂದು ದಿನ ತಂದೆ ಮಾಡುತ್ತಿದ್ದ ವೃತ್ತಿಯನ್ನು ತಾನೂ ಮಾಡಲು ಮುಂದಾದ ಆಗ, ಚರ್ಮವನ್ನು ಕತ್ತರಿಸಲು ಮೊಳೆಯಿಂದ ಪ್ರಯತ್ನಿಸಿದಾಗ ಆ ಮೊಳೆಯು ಅವನ ಕೈಯಿಂದ ಜಾರಿ ಎಡಗಣ್ಣಿಗೆ ಚುಚ್ಚಿತು. ಆಗ ಮನೆಯ ಎಲ್ಲ ಕುಟುಂಬದವರು ಮೌನದಿಂದ ದಿಗ್ಭ್ರಾಂತರಾದರು. ಮುಂದೆ ಅದಕ್ಕೆ ಚಿಕಿತ್ಸೆ ಕೊಡಿಸಿದರೂ ಫಲ ದೊರೆಯಲಿಲ್ಲ. ಅದೇ ಸೋಂಕಿನಿಂದ ಸುಮಾರು ೫ ವರ್ಷದವನಿದ್ದಾಗ ಲೂಯಿಯು ಸಂಪೂರ್ಣ ಅಂಧನಾದನು.

ಮುಂದೆ ತಂದೆ-ತಾಯಿಯು ಮಗನಿಗೆ ಶಿಕ್ಷಣ ಕೊಡುವುದು ಹೇಗೆ ಎಂದು ಯೋಚಿಸಿದರು. ಊರಿನಲ್ಲಿರುವ ಸಾಮಾನ್ಯ ಶಾಲೆಗೆ ಆತನನ್ನು ಸೇರಿಸಿದರು. ಅಲ್ಲಿ ಲೂಯಿಯು ಗುರುಗಳು ಹೇಳಿದ ಪಾಠವನ್ನು ಬಾಯಿಪಾಠ ಮಾಡುತ್ತಿದ್ದನು. ಆದರೆ ಓದಲು ಬರೆಯಲು ಸಾಧ್ಯವಾಗುತ್ತಿರಲಿಲ್ಲ. ನಂತರ ೧೮೨೧ ರಲ್ಲಿ ಲೂಯಿಯು ಫ್ರಾನ್ಸ್‌ನ ಪ್ರಾರಿಸ್ ನಗರದಲ್ಲಿ "The Royal Institute for the Blind Youth" ಎಂಬ ಶಾಲೆಗೆ ಸೇರಿದನು ಈ ಶಾಲೆಯು ಶ್ರೀಯುತ ವ್ಯಾಲೆಂಟೈನ ಹೊವಿ ಎಂಬುವರಿಂದ ೧೭೮೪ ರಲ್ಲಿ ಪ್ಯಾರಿಸಿನಲ್ಲಿ ಅಂಧರಿಗಾಗಿ ಶಾಲೆಯನ್ನು ಪ್ರಾರಂಭಿಸಿದ್ದ. ಇತಿಹಾಸಕಾರರ ಪ್ರಕಾರ ವಿಶ್ವದಾದ್ಯಂತ ಇದು ಅಂಧರ ಮೊಟ್ಟಮೊದಲ ಶಾಲೆ. ಈ ಶಾಲೆಯಲ್ಲಿ ಲೂಯಿಯು ವ್ಯಾಸಂಗ ಮಾಡತೊಡಗಿದನು. ಆದರೆ ಆಗಲೂ ಸಹ ಅಂಧರಿಗಾಗಿ ಯಾವುದೇ ರೀತಿಯ ಓದಲು, ಬರೆಯಲು ಬೇಕಾದಂತಹ ಯಾವುದೇ ಸಾಧನ ಸಾಮಗ್ರಿಗಳಿರಲಿಲ್ಲ. ಈ ಶಾಲೆಯಲ್ಲಿ ಮೌಖಿಕವಾಗಿ ಮಾತ್ರ ಪಾಠವನ್ನು ಮಾಡಲಾಗುತ್ತಿತ್ತು. ಈ ಶಾಲೆಗೆ ನಿವೃತ್ತ ಸೈನ್ಯಾಧಿಕಾರಿ "ಚಾರ್ಲ್ಸ್ ಬಾರ್ಬಿಯೆ" ಎಂಬುವವರು ವಾರ್ಷಿಕ ಸ್ನೇಹ ಸಮ್ಮೇಳನಕ್ಕೆ ಅತಿಥಿ ಭೇಟಿ ಕೊಟ್ಟಿದ್ದರು. ಇವರು ಆ ಶಾಲೆಯ ಅಧಿಕಾರಿಗಳಿಗೆ ೧೨ ಚುಕ್ಕೆಗಳುಳ್ಳ ಒಂದು ಲಿಪಿಯ ಮಾಹಿತಿ ನೀಡಿದರು. ಈ ೧೨ ಚುಕ್ಕೆಗಳುಳ್ಳ ಲಿಪಿಯನ್ನು ಫ್ರಾನ್ಸ್ ರಾಷ್ಟ್ರದ ಸೈನಿಕರು, ಫ್ರಾನ್ಸ್ ಕ್ರಾಂತಿ ಕಾಲದಲ್ಲಿ ಇದನ್ನು ಗುಪ್ತಚರವಾಗಿ ಬಳಸುತ್ತಿದ್ದರು. ಆ ಮಾಹಿತಿಯನ್ನು ಸಹ ನೀಡಿ ಬಾರ್ಬಿಯೆರವರು ಈ ಲಿಪಿಗೆ ಸಂಬಂಧಿಸಿದ ಎಲ್ಲ ಮಾಹಿತಿ ನೀಡಿದರು. ಆದರೆ ಶಾಲೆಯ ಆಡಳಿತ ಮಂಡಳಿಯವರು ಹಾಗೂ ಲೂಯಿಯನ್ನು ಹೊರತುಪಡಿಸಿ ಇನ್ನುಳಿದ ಅಂಧ ಮಕ್ಕಳು ಆ ಲಿಪಿಯನ್ನು ಒಪ್ಪಲಿಲ್ಲ. ಆದರೆ ಲೂಯಿಯು ಅದನ್ನು ತನ್ನ ಹತ್ತಿರ ತೆಗೆದುಕೊಂಡ.



PRINCIPAL
J.S.S. Banashankari Arts, Commerce &
Shantikumar Gubbi Science College,
DHARWAD - 580 004.

6